**ಸಾಕ್ಷಿಯನ್ನು ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕ: 04-08-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರವಾಗಿ ಶ್ರೀ ಬಿ.ಎಂ.ಪಿ ವಕೀಲರಿಂದ:**

ಈ ದಾವೆಗೆ ಪೂರಕವಾಗಿ ಮತ್ತು ಹೆಚ್ಚುವರಿಯಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.–10 | ಪಹಣಿ |
| ನಿ.ಪಿ.–11 | ಆನ್ ಲೈನ್ ಮೂಲಕ ಬೆಳೆ ವಿವರ ದಾಖಲಿಸಿದ ಬಗ್ಗೆ ಮೊಬೈಲ್ ಸ್ಕ್ರೀನ್ ಶಾಟ್ ನ ಫೋಟೋ |
| ನಿ.ಪಿ.–12 ರಿಂದ 14 | ತಹಶೀಲ್ದಾರ್ ರವರಿಗೆ ಕೊಟ್ಟ ಅರ್ಜಿಗಳು |

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎನ್.ಡಿ ವಕೀಲರಿಂದ:**

1. ನಿ.ಪಿ.–12 ರ ಅರ್ಜಿಯಲ್ಲಿ ನಾನು ಕೇಳಿದ ದಾಖಲೆಗಳನ್ನು ತಹಶೀಲ್ದಾರ್ ರವರು ಕೊಟ್ಟಿದ್ದಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಜಮೀನು ಮಂಜೂರಾದ 2 ವರ್ಷಗಳ ನಂತರವೂ ನಾನು ಸಾಗುವಳಿ ಮಾಡದ ಕಾರಣ ಮಂಜೂರಾತಿಯನ್ನು ರದ್ದು ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ನಾನು ಜಮೀನಿನ ಮೇಲೆ ಸಾಲ ಪಡೆದಿದ್ದೇನೆ ಎನ್ನುತ್ತಾರೆ. 2018 ರಲ್ಲಿ ನಿ.ಪಿ.–13 ರಂತೆ ನಾನು ಕೊಟ್ಟ ಅರ್ಜಿಯಲ್ಲಿ ಕೇಳಿರುವ ದಾಖಲೆಗಳನ್ನು ತಹಶೀಲ್ದಾರ್ ರವರು ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

2. ಸರ್ವೆ ನಂಬರ್ 15 ರಲ್ಲಿರುವ ಸುಮಾರು 300–400 ಎಕರೆ ಜಮೀನನ್ನು ಅಳತೆ ಮಾಡಿಲ್ಲ ಮತ್ತು ಅದರ ಪೋಡಿ ಕಾರ್ಯ ಆಗಿಲ್ಲ ಎಂದರೆ ಸರಿ. ನನಗೆ ಕೊಟ್ಟ ಸಾಗುವಳಿ ಚೀಟಿಯ ಪರಕಾರ ನನಗೆ ಮಂಜೂರಾದ ಜಮೀನಿನ ಪೂರ್ವಕ್ಕೆ ರೇವಣ್ಣ ನ ಜಮೀನು. ಪಶ್ಚಿಮಕ್ಕೆ ರಾಮಸ್ವಾಮಿ ಜಮೀನು, ಉತ್ತರಕ್ಕೆ ನಾಗರಾಜ್ ರವರ ಜಮೀನು ಮತ್ತು ದಕ್ಷಿಣಕ್ಕೆ ಅರ್ಜುನ್ ರವರ ಜಮೀನು ಇದೆ. ಸದರಿ ಆಸ್ತಿಗೆ ಸಂಬಂಧಪಟ್ಟ ನಕಾಶೆ ಮಾಡಿದ್ದಾರೆ. ಸಾಕ್ಷಿ ಪುನಃ ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎನ್ನುತ್ತಾರೆ. ನಿ.ಪಿ.–14 ರ ದಾಖಲೆ ಮತ್ತು ವಾದ ಪತ್ರದಲ್ಲಿ ನಾನು ನಮೂದಿಸಿರುವ ಚಕ್ಕುಬಂಧಿಗೆ ಒಳಪಟ್ಟಿರುವ ಆಸ್ತಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಚಕ್ಕುಬಂಧಿ ಯಾವುದೇ ಸರ್ಕಾರಿ ದಾಖಲೆಗಳಲ್ಲಿ ನಮೂದಿಲ್ಲ ಎಂದರೆ ಸರಿಯಲ್ಲ. ಸದರಿ ಚಕ್ಕುಬಂಧಿಯನ್ನು ನಾನೇ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಕ್ಕುಬಂಧಿಯನ್ನು ನಿ.ಪಿ.–14 ಮತ್ತು ವಾದ ಪತ್ರದಲ್ಲಿ ಯಾವ ದಾಖಲೆ ನೋಡಿ ಬರೆಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಸರ್ಕಾರದ ಆದೇಶದ ದಾಖಲೆಯ ಆಧಾರದ ಮೇಲೆ ಬರೆಸಿದ್ದೆ ಎನ್ನುತ್ತಾರೆ. ಆ ರೀತಿ ಯಾವುದೇ ಆದೇಶ ಆಗಿಲ್ಲ ಮತ್ತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಸರ್ವೆ ನಂಬರ್ 15 ರಲ್ಲಿ ಅಥವಾ ದಾವಾ ಸ್ವತ್ತಿನಲ್ಲಿ ನಾನು ಯಾವತ್ತು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**